ಪಿ.ಡಬ್ಲ್ಯೂ ಃ **1**

ಸಾಕ್ಷಿಗೆ ದಿನಾಂಕಃ **12.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು **:** **2** ನೇ ಎದುರುದಾರರ ಪರ **:** ಶ್ರೀ ವಕೀಲರಿಂದ</u>

ನಾನು ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ನಾನು ನಿವೃತ್ತಿಯಾಗಿ **4** ವರ್ಷಗಳು ಕಳೆದಿರುತ್ತದೆ. ನಾನು ನನಗೆ ಸೇರಿದ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ಸದರಿ ಸ್ಕೂಟರ್‌ನ ನೊಂದಣಿ ಸಂಖ್ಯೆ ಗೊತ್ತಿರುವುದಿಲ್ಲ. ಸದರಿ ಸ್ಕೂಟರ್‌ನ್ನು ನಾನೇ ಚಾಲನೆ ಮಾಡುತ್ತಿದ್ದೆ. ನಾನು ಡಿ.ಎಲ್. ಹೊಂದಿರುವುದಿಲ್ಲ. ಸದರಿ ಸ್ಕೂಟರ್‌ಗೆ ವಿಮೆ ಮಾಡಿಸಿರಲಿಲ್ಲ. ರಸ್ತೆಯನ್ನು ದಾಟುವಾಗ ಅಪಘಾತವಾಗಿರುತ್ತದೆ. ಕಾರು ಅಪಘಾತ ಪಡಿಸಿದ್ದು, ಅದರ ನೊಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಅಪಘಾತವಾದಾಗ ನನ್ನ ಜೊತೆ ನನ್ನ ಸಹೋದ್ಯೋಗಿ ಶಿವಣ್ಣ ಇದ್ದರು. ಅಪಘಾತವಾದಾಗ ನನಗೆ ಪ್ರಜ್ಞೆ ತಪ್ಪಿರುತ್ತದೆ. ಅಪೋಲೋ ಆಸ್ಪತ್ರೆಯಲ್ಲಿ ಮೊದಲು **15** ದಿನ ಒಳರೋಗಿಯಾಗಿ ದಾಖಲಾಗಿ ಬಿಡುಗಡೆಯಾಗಿ ನಂತರ ಹೋಗಿ ಶಸ್ತ್ರಚಿಕಿತ್ಸೆ ಆಗಿರುತ್ತದೆ. ಅಪಘಾತದಿಂದ ನನಗೆ ತಲೆಗೆ ಪೆಟ್ಟಾಗಿಲ್ಲ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ಗೊತ್ತಿರುವುದಿಲ್ಲ. ನಾನು ಇತ್ತೀಚೆಗೆ ಕೊನೆಯದಾಗಿ **1** ತಿಂಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದೆ. ಆಗ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ಮರೆವು ಇರುವುದರಿಂದ ಹೇಳಲು ಆಗುವುದಿಲ್ಲ. ನನ್ನ ಎರಡೂ ಕಾಲುಗಳಿಗೆ ರಾಡನ್ನು ಅಳವಡಿಸಿರುತ್ತಾರೆ. ಅಪಘಾತವಾದ ನಂತರ ನಾನು ಕರ್ತವ್ಯ ನಿರ್ವಹಿಸಿದ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮುಖ್ಯ ಶಿಕ್ಷಕರು ನನ್ನ ವಿರುದ್ದ ದೂರು ನೀಡಿರುವುದಿಲ್ಲ. ಅಪಘಾತವಾದ ನಂತರ ನಾನು ಕರ್ತವ್ಯ ನಿರ್ವಹಿಸಲು ಆಗುವುದಿಲ್ಲವೆಂದು ಮನವಿ ನೀಡಿದ್ದ ಬಗ್ಗೆ ನನಗೆ ನೆನಪಿರುವುದಿಲ್ಲ.

**2.** ನನಗೆ ಈಗ **35** ಸಾವಿರ ರೂಪಾಯಿ ಪಿಂಚಣಿ ಬರುತ್ತದೆ. ನಿವೃತ್ತಿ ಸಮಯದಲ್ಲಿ ನನಗೆ ಎಷ್ಟು ವೇತನ ಬರುತ್ತಿತ್ತು ಎಂದು ನನಗೆ ನೆನಪಿರುವುದಿಲ್ಲ. ನನ್ನ ವೇತನ ಬರುತ್ತಿದ್ದ ಬಗ್ಗೆ ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರುಪಡಿಸುತ್ತೇನೆ. ನನಗೆ ಸೇರಿದಂತೆ ಬೂಗತಗಳ್ಳಿ ಗ್ರಾಮದಲ್ಲಿ ಒಂದು ಕಾಲು ಎಕರೆ ಜಮೀನು ಇರುತ್ತದೆ. ಸದರಿ ಜಮೀನನ್ನು ನನ್ನ ತಮ್ಮನು ಮೊದಲಿನಿಂದ ನೋಡಿಕೊಳ್ಳುತ್ತಿದ್ದಾರೆ. ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ನಾನು ಚಾಲನೆ ಮಾಡಲು ಗೊತ್ತಾಗದೇ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ **8** ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಆದಾಯಕ್ಕೆ ನಷ್ಟ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದ ವಾಹನ ಸಂಖ್ಯೆಗಳು ಪೊಲೀಸ್ ದಾಖಲೆಗಳಲ್ಲಿ ನಮೂದು

ಮಾಡಿರುವ ವಾಹನ ಸಂಖ್ಯೆಗಳಿಗೆ ತಾಳೆ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿರುತ್ತದೆ ಎಂದು ಹೇಳುವ ಕಾರಿನ ಚಾಲಕ ನನ್ನ ಪರಿಚಯಸ್ಥ ಆಗಿರುವುದಿಲ್ಲ. ಆಸ್ಪತ್ರೆಯ ದಾಖಲೆಗಳನ್ನುಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ **1** ನೇ ಎದುರುದಾರರ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನ ನ್ನ ಹೇಳಿಕೆಯನ್ನು ಪಡೆದುಕೊಂಡ ಬಗ್ಗೆ ನನಗೆ ನೆನಪಿರುವುದಿಲ್ಲ. ನಿಪಿ **12** ನ್ನು ನಾನು ವೈದ್ಯರಿಗೆ ಹೇಳಿ ಸೃಷ್ಟಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.